## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:05-11-2022 ರಂದು ನವೆಂಬರ್-2022 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, **Hot mix plant, 80 feet road,** ಈಜೀಪುರ, ಬೆಂಗಳೂರು ರಲ್ಲಿ ದಿನಾಂಕ:05.11.2022 ರಂದು ಬೆಳಗ್ಗೆ 12.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

ಹಾಜರಿದ್ದವರು:-

1. ಶ್ರೀ ಮುನಿರಾಜು
2. ಶ್ರೀಮತಿ ಗಂಗಾಂಬಿಕೆ
3. ಶ್ರೀ ಎಂ.ವಿ.ಕೆ. ಅನಿಲ್ ಕುಮಾರ್
4. ಶ್ರೀ ಶ್ರೀರಾಮ್
5. ಶ್ರೀ ದೊರೈ
6. ಶ್ರೀ ನಾನು

ಹಾಜರಿದ್ದ ಅಧಿಕಾರಿಗಳು:-

1. ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
3. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
4. ಶ್ರೀ ಜಗದೀಶ, ಮೌಲ್ಯಮಾಪಕರು
5. ಶ್ರೀ ಜ್ಞಾನೇಶ್, ಸಹಾಯಕ ಅಭಿಯಂತರರು, ಎಲೆಕ್ಟ್ರಿಕಲ್
6. ಶ್ರೀ ಮಾರುತಿ ಮಾರ್ಷಲ್
7. ಶ್ರೀ ಎಸ್. ನಾಗರಾಜ್, ಸೂಪರ್‌ವೈಸರ್, ಬಿ.ಬಿ.ಎಂ.ಪಿ.

* * * * *

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ಶ್ರೀ ಅನಿಲ್‌ಕುಮಾರ್ ರವರು ಮಾತನಾಡಿ, 20ನೇ ಎಲ್ ಅಡ್ಡರಸ್ತೆ, ಶ್ರೀರಾಮ ದೇವಸ್ಥಾನದ ಹತ್ತಿರ ಇರುವ ರಸ್ತೆ ಚರಂಡಿಗಳಲ್ಲಿ ತುಂಬಿರುವ ಹೂಳುಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರಿಸಿದ ಕಾರ್ಯದರ್ಶಿ ಮತ್ತು ವಾರ್ಡ್ ಇಂಜಿನಿಯರ್ ಆದ ಪ್ರದೀಪ್ ಕುಮಾರ್ ರವರು 15 ದಿನಗಳ ಒಳಗೆ ಹೂಳು ತೆರವುಗೊಳಿಸುವುದಾಗಿ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಕೋರಮಂಗಲ ಉಪವಿಭಾಗ



Scanned by CamScanner

ಶ್ರೀ ಮುನಿರಾಜು ರವರು ಮಾತನಾಡಿ, ಈಜೀಪುರ ಸಿಗ್ನಲ್‌ನಿಂದ ಮಡಿವಾಳ ಅಂಡರ್ ಪಾಸ್‌ವರೆಗೆ ನಿರ್ಮಿಸುತ್ತಿರುವ ಫ್ಲೈ ಓವರ್ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ. ಸದರಿ ಕಾಮಗಾರಿಯನ್ನು ಪುನ: ಪ್ರಾರಂಭಿಸುವ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಈಜೀಪುರ ಸಿಗ್ನಲ್‌ನಿಂದ ಮಡಿವಾಳ ಅಂಡರ್ ಪಾಸ್‌ವರೆಗೆ ನಿರ್ಮಿಸುತ್ತಿರುವ ಫ್ಲೈ ಓವರ್ ಕಾಮಗಾರಿಯ ಟೆಂಡರ್ ಅನ್ನು ಪುನ: ಕರೆದಿದ್ದು, ಇದರ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಸಭೆಯಲ್ಲಿ ತಿಳಿಸಿದರು. ಕಾರ್ಯದರ್ಶಿ ರವರು Central Project-5 ನ ಕಾರ್ಯಪಾಲಕ ಅಭಿಯಂತರರು ರವರಿಗೆ ಕರೆ ಮಾಡಿ ಮಾಹಿತಿ ಪಡೆದು ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಯೋಜನೆ (ದಕ್ಷಿಣ ವಲಯ)**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲು ರೂ.10.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಮುಂದಿನ ಸಭೆಯಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಉಪಯೋಗಿಸುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುವಂತೆ ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಘನತ್ಯಾಜ್ಯ ವಿಭಾಗ, ಬಿ.ಬಿ.ಎಂ.ಪಿ**

ಶ್ರೀ ಶ್ರೀರಾಮ್ ರವರು ಮಾತನಾಡಿ, ಬೀದಿ ದೀಪಗಳ ಸಮಸ್ಯೆ ಬಗ್ಗೆ ಬಂದಿರುವ ದೂರುಗಳನ್ನು ಸಂಜೆ 4.00 ರಿಂದ ರಾತ್ರಿ 8.00 ಗಂಟೆಯವರೆಗೆ ಪ್ರತಿನಿತ್ಯ ಪರಿಶೀಲಿಸಿ, ಬಗೆಹರಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಹೊಸದಾಗಿ ಅಳವಡಿಸಿರುವ ಕೆಲವು ಎಲ್.ಇ.ಡಿ. ಬೀದಿ ದೀಪಗಳು ಹಾಳಾಗಿರುತ್ತದೆ. ಆದುದರಿಂದ ಅವುಗಳನ್ನು ಪರಿಶೀಲಸಿ, ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ದೊರೈ ರವರು ಮಾತನಾಡಿ, ಬೀದಿ ದೀಪಗಳಲ್ಲಿ ಅಳವಡಿಸಿರುವ ಟೈಮರ್‌ಗಳು ಹದಗೆಟ್ಟಿದ್ದು, ಅವುಗಳನ್ನು ಸರಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ಆದ ಶ್ರೀ ಜ್ಞಾನೇಶ್ ರವರು ಮಾತನಾಡಿ, ಎಲ್ಲಾ ಸಮಸ್ಯೆಗಳನ್ನು ಒಂದು ವಾರದ ಒಳಗೆ ಪರಿಹರಿಸುವುದಾಗಿ ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬೀದಿ ದೀಪಗಳು, ಬಿ.ಬಿ.ಎಂ.ಪಿ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಎವರೆಸ್ಟ್ ಸ್ಕೂಲ್‌ನಿಂದ ರಿಂಗ್ ರಸ್ತೆಯವರೆಗೆ ಬೃಹತ್ ಮಳೆನೀರುಗಾಲುವೆಯಲ್ಲಿ RCC Wall ನಿರ್ಮಾಣ ಕಾಮಗಾರಿ ಕಾರ್ಯಾಚರಣೆ ಮುಗಿದಿದ್ದಲ್ಲಿ, ಎಸ್.ಡಬ್ಲ್ಯೂ.ಡಿ. ಪಕ್ಕದಲ್ಲಿ Backfilling ಮಾಡಿಕೊಡಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬೃಹತ್ ಮಳೆನೀರುಗಾಲುವೆ, ಬಿ.ಬಿ.ಎಂ.ಪಿ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಅಶ್ವಿನಿ ಲೇಔಟ್ ಪ್ರದೇಶದಲ್ಲಿ ಮಳೆಯಿಂದಾಗಿ ಪ್ರವಾಹ ಉಂಟಾಗುತ್ತಿರುವುದರಿಂದ ಅಶ್ವಿನಿ ಲೇಔಟ್‌ನಲ್ಲಿ ಅಳವಡಿಸಿರುವ ಒಳಚರಂಡಿಯ ಕೊಳವೆ ಪಂಪ್ ಅನ್ನು ಸೋನಿ ಸಿಗ್ನಲ್ ಕಡೆಗೆ ಬದಲಾಯಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**



Scanned by CamScanner

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಅಶ್ವಿನಿ ಲೇಔಟ್ ಪ್ರದೇಶದಲ್ಲಿ ಅಳವಡಿಸಿರುವ Wetwel ಪಂಪ್ ಅನ್ನು Upgrade ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ.**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕೋರಮಂಗಲ ಚಲಘಟ್ಟ ಕೆ–100 ವ್ಯಾಲಿಯ ತಳದಲ್ಲಿ ಅಳವಡಿಸಿರುವ 2000 ಎಂ.ಎಂ. ವ್ಯಾಸದ ಒತ್ತಡದಿಂದ ನಿರ್ವಹಿಸುವ ಒಳಚರಂಡಿ ಕೊಳವೆಯನ್ನು ವಿನ್ಯಾಸದಂತೆ ಅಳವಡಿಸದೆ, ಪ್ರಸ್ತುತ ಇರುವ ಎಸ್.ಡಬ್ಲ್ಯೂ.ಡಿ. ತಳಕ್ಕಿಂತ 1.00ಮೀ. ಕೆಳಭಾಗದಲ್ಲಿ ಅಳವಡಿಸಬೇಕಾಗಿದ್ದು, ಆದರೆ ಹಾಲಿ ಇರುವ ತಳಮಟ್ಟದಲ್ಲಿ ಅಳವಡಿಸಿರುವುದರಿಂದ ನೀರನ್ನು ಸಾಗಿಸುವ ಸಾಮರ್ಥ್ಯ ಕುಗ್ಗಿರುವುದರಿಂದ ಕೆಳಭಾಗದ ಪ್ರದೇಶಗಳಲ್ಲಿ ಪ್ರವಾಹ ಉಂಟಾಗುತ್ತಿದ್ದು, ಇದನ್ನು ತಪ್ಪಿಸಲು ಎನ್.ಜಿ.ವಿ. ಯಿಂದ ಚಲಘಟ್ಟ ವ್ಯಾಲಿಗೆ ಸಂಪರ್ಕಿಸುವ ಪೈಪ್‌ಲೈನ್ ರಸ್ತೆ ಮುಖಾಂತರ ಹಾದು ಹೋಗಿರುವ ಹಳೆಯ ಒಳಚರಂಡಿ ಮಾರ್ಗವನ್ನು ಪ್ರವಾಹದ ಸಂದರ್ಭಗಳಲ್ಲಿ ನೀರನ್ನು ಹರಿಬಿಡಲು ಉಪಯೋಗಿಸುವ ಬಗ್ಗೆ ಈ ಹಿಂದಿನ ಸಭೆಯಲ್ಲಿ ಕಾರ್ಯಸಾಧ್ಯತೆ ವರದಿಯನ್ನು ಸಿದ್ಧಪಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ / ಡಬ್ಲ್ಯೂ.ಡಬ್ಲ್ಯೂ.ಎಂ. ಮತ್ತು ಬಿ.ಬಿ.ಎಂ.ಪಿ. ಎಸ್.ಡಬ್ಲ್ಯೂ.ಡಿ ರವರಿಗೆ ಜಂಟಿಯಾಗಿ ಸ್ಥಳ ತಪಾಸಣೆ ಕೈಗೊಳ್ಳುವಂತೆ ತಿಳಿಸಿದ್ದು, ಈ ಬಗ್ಗೆ ವರದಿಯನ್ನು ಮುಂದಿನ ಸಭೆಯಲ್ಲಿ ತಿಳಿಸುವಂತೆ ಕೋರಿದರು.

ಎನ್.ಜಿ.ವಿ. ವೆಟ್‌ವೆಲ್ ನಿರ್ಮಿಸಿ, ಪಂಪ್‌ಗಳನ್ನು ಅಳವಡಿಸಿ, ಕೆ–100 ವ್ಯಾಲಿಯ ತಳದಲ್ಲಿ ಅಳವಡಿಸಿರುವ 2000 ಎಂ.ಎಂ. ವ್ಯಾಸದ ಒತ್ತಡದಿಂದ ನಿರ್ವಹಿಸುವ ಒಳಚರಂಡಿ ಕೊಳವೆಯನ್ನು ನಿರ್ವಹಿಸಲು 130.00 ಕೋಟಿಗಳ ವೆಚ್ಚದಲ್ಲಿ 12 ಪಂಪ್‌ಗಳನ್ನು ಸ್ಥಾಪಿಸಿದ್ದು, ಪ್ರಸ್ತುತ ಈ ಪಂಪ್‌ಗಳಲ್ಲಿ ಎಷ್ಟು ಪಂಪ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂಬ ವರದಿಯನ್ನು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸುವಂತೆ ಕೋರಿದರು.

**ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ. ಡಬ್ಲ್ಯೂ.ಡಬ್ಲ್ಯೂ.ಎಂ.**
**ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು,**
**ಎಸ್.ಡಬ್ಲ್ಯೂ.ಡಿ., ಡಬ್ಲ್ಯೂ.ಡಬ್ಲ್ಯೂ.ಎಂ**

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–148 ಈಜೀಪುರ

(ಶ್ರೀಮತಿ ರೂಪ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–148 ಈಜೀಪುರ



Scanned by CamScanner

ವಾರ್ಡ್ = 148 (185)

ಸಿದ್ದಾಪುರ ವಾರ್ಡ್ ಸಮಿತಿ ಸಭೆ

ದಿನಾಂಕ = 05/11/2022

Prakash

Date: ............ Page ............

ಸಮಯ = 12.00 PM

ಹಾಜರಿದ್ದ ಅಧಿಕಾರಿಗಳು

1) N. Nagaraj S/O [signature]
2 MUTTURAJA. T.S. J.H.I [signature]
3. Maruthi mm Marshal [signature]
4) Jagadeesha W-148 Assess [signature]
5) Y. VIJAY KUMAR R.I/W-148 [signature] 9945083321 9740383131
6) S. NANU Ghetal - w - 148 [signature] 9945078731
7) P. Jnaneshwar AE(Ele) [signature] 9611536847

ARO T

arokml.@gmail.com

btmsewmcell@gmail.com

ಹಾಜರಿದ್ದ ಸದಸ್ಯರುಗಳು

N. Muni Raju [signature]

Gangabitra

M.V.K. Anil Kumar [signature]

[signature]

S. DORAI

# 39. I MAIN II Cros

Ejipura Banglore 560047

9845821249

[signature]